ಹಿಂಬಾಲಿಸುವುದನ್ನೇನಾದ್ರೂ ಗಮನಿಸಿದಿರಾ?"

ಆಗ ಚಾರ್ಲಿಯ ಮೊಗದ ಬಣ್ಣ ಕೊಂಚ ಬದಲಾಗಿದ್ದನ್ನು ಗಮನಿಸಿದೆ. ಅವ್ಯಕ್ತ ಭೀತಿ ಆತನನ್ನು ಆವರಿಸಿದಂತಿತ್ತು.

"ಚಿದಾನಂದನನ್ನು ಹಿಂಬಾಲಿಸಿಕೊಂಡು ಇಬ್ಬರು ಬಂದಿದ್ದರಲ್ವೇ. ಅವರಿಗೆ ಪ್ರಾಯಶಃ ಚಿದಾನಂದ ಸಿಕ್ಕಿಲ್ಲ ಅಥವಾ ಸಿಕ್ಕಿದ್ರೂ ಅವರಿಗೆ ಬೇಕಾದ ವಸ್ತು ಆತನಿಂದ ಲಭ್ಯವಾಗಿಲ್ಲ. ಆಮೇಲೆ ಸ್ಯಾಮುಯೆಲ್ ಬಂದ. ನನ್ನ ಎಣಿಕೆಯಂತೆ, ಅವನೂ ಚಿದಾನಂದನಲ್ಲಿದ್ದ ಆ ವಸ್ತುವನ್ನು ಹುಡುಕಿಕೊಂಡೇ ಬಂದಿದ್ದು. ಇಲ್ಲಿ ನಿಂತು ನಿಮ್ಮ ಮನೆಯ ಮೇಲೆ ನಿಗಾ ಇಟ್ಟದ್ದು ಆ ದಿನ ಬಂದ ಹಿಂಬಾಲಕರಲ್ಲೊಬ್ಬ ಆಗಿರಬೇಕು."

"ಅವ್ನು ಯಾವಾಗ್ಲಿಂದ ಬಂದಿದ್ದ ಅಂತ ಹೇಳೋಕೆ ಸಾಧ್ಯವೇನು?" ಚಾರ್ಲಿಯ ದನಿಯಲ್ಲಿ ಆತಂಕ ನಿಚ್ಚಳವಾಗಿತ್ತು.

"ಈ ಗುರುತುಗಳು ತುಂಬಾ ಹಳೆಯದಲ್ಲ. ಚಿದಾನಂದ ನಿಮ್ಮಲ್ಲಿಗೆ ಬಂದು ಹೋಗಿದ್ದು ಸುಮಾರು ನಾಲ್ಕು ವಾರಗಳ ಹಿಂದೆಯಲ್ವೆ? ಕಳೆದ ವಾರ ಮಳೆ ಬಂದಿತ್ತಲ್ವೆ. ಹಾಗಾಗಿ, ಅದಕ್ಕೂ ಮೊದಲು ಬಂದಿದ್ದಾಗಿದ್ರೆ, ಈ ಗುರುತುಗಳು ಅಳಿಸಿ ಹೋಗಿರಬೇಕಿತ್ತು. ಆದ್ದರಿಂದ ಇದು ಒಂದು ವಾರದ್ದೀಚೆನದ್ದು. ಬಹುತೇಕ ಸ್ಯಾಮುಯೆಲ್ ಬಂದ ನಂತ್ರವಷ್ಟೇ ಈ ಆಸಾಮಿ ನಿಮ್ಮ ಕಾಂಪೌಂಡಿನೊಳಕ್ಕೆ ಬಂದಿರಬೇಕು."

"ಓಹ್! ಇದು ತೀರಾ ಗಂಭೀರವಾಗಿದೆ. ಇನ್ನೊಮ್ಮೆ ಅವ್ನು ಕಂಡ್ರೆ, ಶೂಟ್ ಮಾಡ್ತೀನಿ. ಐ ಡೋಂಟ್ ಕೇರ್." ದನಿ ಎತ್ತರಿಸಿ ಹೇಳಿದ ಚಾರ್ಲಿ.

"ಏನೇ ಇರಲಿ, ಚಾರ್ಲಿ, ನಿಮ್ಮ ಸಹಕಾರಕ್ಕೆ ತುಂಬಾ ಧನ್ಯವಾದಗಳು."

ಕರಮಚಂದನ ಮೊಗದಲ್ಲಿ ಒಂದು ವಿಶೇಷ ಕಳೆಯಿತ್ತು, ಆತನಿಗೆ ಮಹತ್ವದ ಸುಳಿವು ದೊರಕಿದಾಗೆಲ್ಲಾ ಅಂತಹ ಕಳೆಯನ್ನು ನಾನು ಕಂಡಿದ್ದೆ.

"ಬಿದ್ದಪ್ಪ, ನೀನೀಗ ಆಫೀಸಿಗೆ ಹೋಗು. ಆ ಫ್ರೆಡರಿಕ್ ಬರ್ತಾನೆ. ವಕಾಲತ್ತಿನಲ್ಲಿ ಅವ್ನ ಸಹಿ ತಗೋ. ನನಗೀಗ ಸ್ವಲ್ಪ ದೂರವಾಣಿ ಕಚೇರಿಯಲ್ಲಿ ಕೆಲ್ಸ ಇದೆ. ಒಬ್ಬರ ಸಿಡಿಆರ್ ಬೇಕಿತ್ತು. ಕಾಲ್ ಡಿಟೇಲ್ಸ್ ರೆಕಾರ್ಡ್ಸ್!"

ನಾನು ಆಟೊ ಒಂದನ್ನು ಏರಿದೆ.

★ ★ ★

ಮರುದಿನ ಬೆಳಿಗ್ಗೆ ನಾವು ಪತ್ರಿಕೆಯಲ್ಲಿ ಕಣ್ಣಾಡಿಸುತ್ತಾ, ಚಹಾ ಹೀರುತ್ತಿದ್ದಾಗ ಕರೆಗಂಟೆ ಕರ್ಕಶವಾಗಿ ಬಾರಿಸಿತು. ಕದ ತೆರೆದಾಗ, ಏದುಸಿರು ಬಿಡುತ್ತಾ, ತಂಗರಾಜು ನಿಂತಿದ್ದ!

"ಸಾರ್, ನಮ್ ಮನೇಗೆ ನಿನ್ನೆ ರಾತ್ರಿ ಕಳ್ಳರು ನುಗ್ಗಿದಾರೆ!! ಕಿಟಕಿಯ ಸರಳು ಬಗ್ಗಿಸಿ, ಒಳ ಬಂದಿದ್ದಾರೆ. ಏನೂ ಕದ್ದಿಲ್ಲ. ಆದ್ರೆ ಆ ಹೂದಾನಿ ಮಾತ್ರ ಕೆಳಕ್ಕೆ ಹಾಕಿ ಚೂರು ಚೂರು ಮಾಡಿದ್ದಾರೆ! ಯಾಕೆ ಅಂತ್ಲೇ ಗೊತ್ತಾಗ್ತಿಲ್ಲ. ಸ್ಯಾಮುಯೆಲ್ ಅದಿಕ್ಕೆ ಒಳ್ಳೇ ರೇಟು ಹೇಳಿದ್ದ. ನಷ್ಟ ಆಯ್ತು!" ತಂಗರಾಜು ಆ ಹೊತ್ತಲ್ಲೂ ವ್ಯವಹಾರದ ಮಾತು ಆಡಿದ.

"ಒಡೆದ ಹೂದಾನಿ!" ಕರಮಚಂದ ಉದ್ಗಾರ ತೆಗೆದ.

"ಪೊಲೀಸಿಗೆ ದೂರು ಕೊಟ್ರಾ?" ನಾನು ಕೇಳಿದೆ.

"ಕೊಡೋ ಮೊದ್ಲು ನಿಮ್ಗೆ ಹೇಳೋಣಾಂತ ಬಂದೆ. ಇನ್ನೂ ಒಂದು ಆಶ್ಚರ್ಯಕರವಾದ ಸಂಗತಿಯಿದೆ... ಪೊನ್ನಪ್ಪನ ಮನೇಗೂ ನಿನ್ನೆ ರಾತ್ರೀನೆ ಕಳ್ಳರು ಪ್ರವೇಶಿಸಿದ್ದಾರಂತೆ. ಅಲ್ಲಿಯೂ